ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 151 ಕ್ಕೆ ಉತ್ತರಿಸುವ ಕುರಿತು.

ಪ್ರಶ್ನೆ:
ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹದಲ್ಲಿ ಹಿಂದೆ ವಾಸ್ತವವಾಗಿದ್ದ, ಅಧಿಕಾರಿಯೊಬ್ಬರು ಪಾರಂಪಾರಿಕ ಪೀಠೋಪಕರಣಗಳನ್ನು ತೆಗೆದುಕೊಂಡು ಹೋಗಿದ್ದು, ಸದರಿ ಪೀಠೋಪಕರಣಗಳನ್ನು ಸಂಸ್ಥೆಗೆ ಹಿಂದಿರುಗಿಸುವಂತೆ ಹಲವು ಪತ್ರ ವ್ಯವಹಾರಗಳು ನಡೆದಿದ್ದರೂ ಸಹ ಹಾಗೂ ಈ ವಿಷಯವು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದರೂ ಸಹ ಇದುವರೆವಿಗೂ ಪೀಠೋಪಕರಣಗಳನ್ನು ಹಿಂದುರುಗಿಸದೇ ಇರುವ ಅಧಿಕಾರಿಯ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳುವ ವಿಷಯದ ಬಗ್ಗೆ

ಉತ್ತರ:
ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹದಲ್ಲಿ ದಿ:02-10-2020 ರಿಂದ 14-11 2020 ರವರೆಗೆ ಮೈಸೂರಿನ ಅಂದಿನ ಜಿಲ್ಲಾಧಿಕಾರಿ ವ್ಯಾಸ್ತವ್ಯ ಮಾಡಿದ್ದರು. ಅತಿಥಿ ಗೃಹವನ್ನು ತೆರವುಗೊಳಿಸುವಾಗ, ಅವರ ಸಾಮಗ್ರಿಗಳನ್ನು ಸಾಗಿಸುವ ಸಂದರ್ಭದಲ್ಲಿ ಅತಿಥಿ ಗೃಹಕ್ಕೆ ಸೇರಿದ ಕೆಲವು ಸಾಮಗ್ರಿಗಳನ್ನು ಸಾಗಿಸಿರುತ್ತಾರೆ. ಈ ಸಾಮಗ್ರಿಗಳನ್ನು 2019 ನೇ ಸಾಲಿನಲ್ಲಿ ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹವನ್ನು ನವೀಕರಣ ಮಾಡುವ ಸಂದರ್ಭದಲ್ಲಿ ಖರೀದಿ ಮಾಡಲಾಗಿತ್ತು. ಅತಿಥಿ ಗೃಹದ ಈ ಸಾಮಗ್ರಿಗಳು ಯಾವುದೇ ಪಾರಂಪರಿಕ ವಸ್ತುಗಳಾಗಿರುವುದಿಲ್ಲ. ಆಡಳಿತ ತರಬೇತಿ ಸಂಸ್ಥೆಯಿಂದ ಜಿಲ್ಲಾಧಿಕಾರಿಗಳು, ಮೈಸೂರು ಇವರಿಗೆ ದಿ:16-08-2020, 08-01-2021 ಮತ್ತು 30-11-2022 ರಲ್ಲಿ ಮೈಸೂರು ಜಿಲ್ಲಾಧಿಕಾರಿಗಳ ವಸತಿ ಗೃಹದಲ್ಲಿ ಸಂಸ್ಥೆಗೆ ಸೇರಿದ ಸಾಮಗ್ರಿಗಳು ಇರುವ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡುವಂತೆ ಪತ್ರ ಬರೆಯಲಾಗಿದೆ. ಸಂಸ್ಥೆಯು ಬರೆದಿರುವ ಪತ್ರಕ್ಕೆ ಸದರಿಯವರಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

ಸಂಖ್ಯೆ: ಸಿಆಸುಇ (ಆಸು) 164 ಇಆಸು 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ